## ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ -504/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮೂರ್ತಿ | ಸಿಡಬ್ಲ್ಯೂ 21 |
| ತಂದೆಯ ಹೆಸರು | - | ರಾಮೇಗೌಡ | ಪಿಡಬ್ಲ್ಯೂ 15 |
| ವಯಸ್ಸು | - | 35 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಮಾದಾಪುರ | ದಿ. 27.03.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಸಾಕ್ಷಿಗೆ ಅಮಾನತ್ತು ಮಹಜರ್ ನಿಪಿ5 ನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ, ಸಾಕ್ಷಿ ಸಹಿಯನ್ನು ನಿಪಿ5 ಬಿ ಎಂದು ಗುರ್ತಿಸಲಾಯಿತು. 4 ವರ್ಷದ ಹಿಂದೆ ಕೆ ಆರ್ ನಗರ ಆಸ್ಪತ್ರೆಯಲ್ಲಿ ಮೃತ ನಿಂಗಮ್ಮನನ್ನು ನೋಡಲು ಬಂದಿದ್ದೆವು, ಆಗ ಆಸ್ಪತ್ರೆಯಲ್ಲಿ ಪೊಲೀಸರು ಶವ ಪಂಚನಾಮೆ ಜರುಗಿಸಿರುತ್ತಾರೆ. ಮೃತ ನಿಂಗಮ್ಮನ ಸೀರೆ, ರವಿಕೆ, ಮೂರು ವಿಸರೆ ಬಾಟಲಿಗಳನ್ನು ವಶಪಡಿಸಿಕೊಂಡು ನಿಪಿ5 ರಂತೆ ಮಹಜರ್ ಜರುಗಿಸಿರುತ್ತಾರೆ. ಮುಮಾ 2 ಮತ್ತು 3 ನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ

2) ದಿನಾಂಕಃ 02-10-2014 ರಂದು ಕೆ ಆರ್ ನಗರ ಪೊಲೀಸ್ ಠಾಣೆಯಲ್ಲಿ ಮೃತ ನಿಂಗಮ್ಮನ ಸೀರೆ, ರವಿಕೆ ಮತ್ತು ಮೂರು ವಿಸರೆ ಬಾಟಲಿಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ನಿಜ. ಆಗ ನಿಪಿ5 ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ನಿಜ.

<u>ಪಾಟೀ ಸವಾಲು</u> -

ಆರೋಪಿ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

ಸಿಸಿ -504/2015

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕುಮಾರ್ | ಸಿಡಬ್ಲ್ಯೂ 17 |
| ತಂದೆಯ ಹೆಸರು | - | ಪುಟ್ಟೇಗೌಡ | ಪಿಡಬ್ಲ್ಯೂ 14 |
| ವಯಸ್ಸು | - | 44 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಮಾದಾಪುರ | ದಿ. 27.03.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 1 ನನ್ನ ಬಾವ, ಮೃತ ನಿಂಗಮ್ಮ ನನ್ನ ಅತ್ತೆ, ನಾಲ್ಕು ವರ್ಷದ ಹಿಂದೆ ಸಂಜೆ 6.00 ಗಂಟೆ ಸಮಯದಲ್ಲಿ ನಿಂಗಮ್ಮನಿಗೆ ಆರೋಪಿತರು ಹೊಡೆದಿದ್ದರು. ನಿಂಗಮ್ಮನಿಗೆ ಬಲಗಾಲಿಗೆ ಗಾಯ ಆಗಿತ್ತು ಎಂದು ಕೆ ಆರ್ ನಗರ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ನಾನು ಮೃತ ನಿಂಗಮ್ಮನಿಗೆ ವಿಚಾರಿಸಲಾಗಿ ಅವರು ಓಡಾಡುವ ರಸ್ತೆಯ ಸಂಬಂದವಾಗಿ ಗಲಾಟೆ ಮಾಡಿ ಆರೋಪಿತರು ಊರುಗೋಲಿನಿಂದ ನನ್ನ ಕಾಲಿಗೆ ಹೊಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ನಿಂಗಮ್ಮ ತೀರಿಕೊಂಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು -

ಆರೋಪಿ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

<u>ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ</u>